ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ.,
ನ್ಯಾಯಾಲಯ, ಚಿಕ್ಕಮಗಳೂರು.

ಸಿ.ಸಿ.85/2022

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಟಿ.ಬಿ.ಶಿವಕುಮಾರನಾಯಕ್ | ಪಿ.ಡಬ್ಲ್ಯೂ.3 |
| ತಂದೆಯ ಹೆಸರು | : | ಆರ್.ಭೀಮಾನಾಯಕ್ | ಸಿ.ಡಬ್ಲ್ಯೂ.13 |
| ವಯಸ್ಸು | : | 52 ವರ್ಷ | |
| ವೃತ್ತಿ | : | ಹೆಚ್.ಸಿ.ನಂ.226, ಸಂಚಾರಿ ಪೊಲೀಸ್ ಠಾಣೆ, ಚಿಕ್ಕಮಗಳೂರು | |
| ವಾಸ | : | ಚಿಕ್ಕಮಗಳೂರು | |

ದಿನಾಂಕಃ 06-07-2026 ರಂದು ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ ಅಭಿಯೋಜನೆ ಪರ ಮಾನ್ಯ ಎಪಿಪಿ ರವರಿಂದಃ-

ನಾನು ಸೆಪ್ಟೆಂಬರ್ 2017 ರಿಂದ ಆಗಸ್ಟ್ 2024 ರವರೆಗೆ ಚಿಕ್ಕಮಗಳೂರು ನಗರ ಪೊಲೀಸ್ ಠಾಣೆಯಲ್ಲಿ ಹೆಚ್.ಸಿ. ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ10.05.2020 ರಂದು ನಾನು ಹಗಲು ಎಸ್.ಹೆಚ್.ಓ ಕರ್ತವ್ಯದಲ್ಲಿ ಇದ್ದಾಗ ಎಂ.ಜಿ ಆಸ್ಪತ್ರೆಯಿಂದ ಒಂದು ಮಾಹಿತಿ ಬಂದಿದ್ದು ನಾನು ಎಂ.ಜಿ ಆಸ್ಪತ್ರೆಗೆ ಹೋಗಿದ್ದು ಅಲ್ಲಿ ಸದರಿ ಮಾಹಿತಿಯ ಬಗ್ಗೆ ಮನವಿ ಪತ್ರವನ್ನು ಪಡೆದಿರುತ್ತೇನೆ. ಸದರಿ ಮನವಿ ಪತ್ರವನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-3 ಎಂದು ಗುರುತಿಸಲಾಗಿದ್ದು ನನ್ನ ಸಹಿ ನಿಪಿ-3(ಬಿ) ಇರುತ್ತದೆ. ನಂತರ

ಗಾಯಾಳು ಶರತ್ ಕುಮಾರ್ ನ ಹೇಳಿಕೆಯನ್ನು ಸಂಜೆಃ 06.00 ಗಂಟೆಯಿಂದ 06.45 ರವರೆಗೆ ಪಡೆದಿರುತ್ತೇನೆ. ಸದರಿ ಹೇಳಿಕೆ ದೂರನ್ನು ನೋಡುತ್ತಿದ್ದು ಅದನ್ನು ನಿಪಿ-18 ಎಂದು ಗುರುತಿಸಲಾಗಿ ನನ್ನ ಸಹಿ ನಿಪಿ-18(ಎ) ಇರುತ್ತದೆ. ನಂತರ ಠಾಣೆಗೆ ವಾಪಾಸಾಗಿದ್ದು ಪ್ರಕರಣವನ್ನು ದಾಖಲಿಸಿ ಪ್ರ.ವ ವರದಿಯನ್ನು ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ.  ಪ್ರ.ವ ವರದಿಯನ್ನು ನೋಡುತ್ತಿದ್ದು ಅದನ್ನು ನಿಪಿ-19 ಎಂದು ಗುರುತಿಸಲಾಗಿ ನನ್ನ ಸಹಿ ನಿಪಿ-19(ಎ) ಇರುತ್ತದೆ.

<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ-</u>

ಆಸ್ಪತ್ರೆಯಿಂದ ನಗರ ಠಾಣೆಗೆ ವೈಯರ್ ಲೆಸ್ ಮೂಲಕ ಮಾಹಿತಿ ಬಂದಿರುತ್ತದೆ. ನಾನು ಯಾವುದೇ ಮನವಿ ಪತ್ರವನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನಾನು ಗಾಯಾಳುವಿನ ಹೇಳಿಕೆ ದೂರನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನಾನು ದೂರಿನ ಆಧಾರದ ಮೇಲೆ ಪ್ರ.ವ ವರದಿಯನ್ನು ದಾಖಲಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲದೇ ಇದ್ದರೂ ಕೂಡಾ ಆತನ ವಿರುದ್ಧ ಸುಳ್ಳು ದೂರನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲಾ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಒಃ

Sd/-
(ಕುಮಾರಿ ಸುಜಾತ)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿ.ಜೆ.ಎಂ.,ಚಿಕ್ಕಮಗಳೂರು.

C.C.No.85/2022
PW-4 CW-13

**ಎಸ್‌ಆರ್ಃ**